**ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 19-08-2023.**

**ಮುಂದುವರೆದ ಪಾಟೀ ಸವಾಲುಃ 2 ಮತ್ತು 4 ನೇ ಪ್ರತಿವಾದಿ ಪರ ಶ್ರೀ.ವಿ ಎಸ್ ಪಿ ವಕೀಲರಿಂದಃ**

12. 1990 ರಿಂದ 2005-06 ರವರೆಗೆ ನಿಮ್ಮ ಒಟ್ಟು ಕುಟುಂಬದ ಆದಾಯ ಎಷ್ಟು ಆಗಿದೆ ಎಂದರೆ ಸಾಕ್ಷಿಯು ನಿಖರವಾಗಿ ಹೇಳಲು ಬರುವುದಿಲ್ಲ ಆದರೆ ಪ್ರತಿ ವರ್ಷ ಅಂದಾಜು ಆದಾಯದ ಬಗ್ಗೆ ಹೇಳಬಹುದು ಎಂದು ನುಡಿಯುತ್ತಾರೆ. 1990 ರಲ್ಲಿ ನಮ್ಮ ಒಟ್ಟು ಕುಟುಂಬಕ್ಕೆ ಸುಮಾರು 1 ಲಕ್ಷ ಆದಾಯ ಇದ್ದಿರಬಹುದು. 1990 ರಿಂದ 2005-06 ರ ವರೆಗಿನ ಒಟ್ಟು ಕುಟುಂಬದ ಆದಾಯ ಎಂದು ತೋರಿಸಲು ನಿಮ್ಮ ಬಳಿ ದಾಖಲೆ ಇದೆಯಾ ಎಂದರೆ ಸಾಕ್ಷಿಯು ನನ್ನ ಬಳಿ ದಾಖಲೆ ಇಲ್ಲ, ಪ್ರತಿವಾದಿ ನಂ.2 ರವರ ಬಳಿ ಇದೆ ಎಂದು ಹೇಳುತ್ತಾರೆ. ಈ ದಾವೆಯನ್ನು ಹಾಕುವ ಮುಂಚೆ ನಾನು ನಮ್ಮ ಒಟ್ಟು ಕುಟುಂಬಕ್ಕೆ 1990 ರಿಂದ 2005-06 ರವರೆಗೆ ಎಷ್ಟು ಆದಾಯ ಇತ್ತು ಎಂದು ವಿವರಣೆ ಪಡೆದಿದ್ದೆನೆ. 1990 ರಿಂದ 2005-06 ರ ವರೆಗಿನ ಒಟ್ಟು ಕುಟುಂಬದ ಒಕ್ಕಲುತನದಿಂದ ಬರುವ ಲಾಭ ಏನು ಆಗಿತ್ತು ಎಂದರೆ ಸಾಕ್ಷಿಯು ನಿಖರವಾಗಿ ವರ್ಷ ಕೇಳಿದರೆ ಹೇಳುತ್ತೇನೆ ಎಂದು ಹೇಳುತ್ತಾರೆ. 1990 ರಲ್ಲಿ ನಮ್ಮ ಒಟ್ಟು ಕುಟುಂಬಕ್ಕೆ ಒಕ್ಕಲುತನದಿಂದ ಕೂಡಿಕೊಂಡು ಒಂದು ಲಕ್ಷ ಆದಾಯ ಇತ್ತು. ಆದರೆ ಭತ್ತ ಮತ್ತು ಕಬ್ಬು ಬೆಳೆಗಳಿಂದ ಎಷ್ಟು ಆದಾಯ ಬರುತ್ತಿತ್ತು ಎಂದು ಹೇಳಲು ಬರುವುದಿಲ್ಲ. ಆ ಸಮಯದಲ್ಲಿ ನಾನು ವಿದ್ಯಾರ್ಥಿ ಆಗಿದ್ದೆ. 1990 ರಿಂದ 2005-06 ರ ವರೆಗೆ ನಾನು ನಮ್ಮ ತಂದೆಗೆ ಮತ್ತು ಪ್ರತಿವಾದಿ ನಂ.2 ರವರಿಗೆ ಆದಾಯದ ಕುರಿತು ವಿವರಣೆ ಕೇಳಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2

ಆಗಲಿ ಬೇರೆಯವರು ಆಗಲಿ ಒಟ್ಟು ಕುಟುಂಬದ ಜವಾಬ್ದಾರಿಯನ್ನು ಎಂದು ವಹಿಸಿರಲಿಲ್ಲ ನಮ್ಮ ತಂದೆಯೇ ಒಟ್ಟು ಕುಟುಂಬಂದ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆ ಒಟ್ಟು ಕುಟುಂಬದ ಜವಾಬ್ದಾರಿಯನ್ನು ನೋಡಿಕೊಳ್ಳುತ್ತಿದ್ದರಿಂದ ಪ್ರತಿವಾದಿ ನಂ.2 ರವರು ಆದಾಯದ ದಾಖಲೆಗಳನ್ನು ಇಟ್ಟುಕೊಳ್ಳುವ ಯಾವುದೇ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ.

13. ಪ್ರತಿವಾದಿ ನಂ.2 ರವರು ಖರೀದಿಸಿರುವ 5 ಆಸ್ತಿಗಳನ್ನು ಖರೀದಿಸಲು ನಾನು ಸಹ ಹಣವನ್ನು ತೊಡಗಿಸಿದ್ದೆ ಆದರೆ ನಿಖರವಾಗಿ ಯಾವ ಆಸ್ತಿಗೆ ಎಷ್ಟು ಹಣ ತೊಡಗಿಸಿದ್ದೆನೆ ಎಂದು ಹೇಳಲು ಬರುವುದಿಲ್ಲ. ನಾನು ಹಣದ ರೂಪದಲ್ಲಿ ತೊಡಗಿಸಿದ್ದೆ. ನೀವು ಹಣ ತೊಡಗಿಸಿದ್ದಿರಿ ಎಂದು ತೋರಿಸಲು ದಾಖಲೆ ಇದೆಯಾ ಎಂದರೆ ಸಾಕ್ಷಿಯು ನಾನು ಸದರಿ ಆಸ್ತಿಗಳನ್ನು ನಮ್ಮ ಒಟ್ಟು ಕುಟುಂಬಕ್ಕೆ ಖರೀದಿಸುತ್ತಿದ್ದು ನಮ್ಮ ಕುಟುಂಬದ ಸಲುವಾಗಿ ಹಣವನ್ನು ಕೊಟ್ಟಿದ್ದೆ ಆದರೆ ದಾಖಲೆ ಪಡೆಯಲಿಲ್ಲ ಎಂದು ಹೇಳುತ್ತಾರೆ. ನಾನು ಸದರಿ ಆಸ್ತಿಗಳನ್ನು ಖರೀಸಲು ಯಾವುದೇ ಹಣವನ್ನು ತೊಡಗಿಸಿಲ್ಲ ಆದ್ದರಿಂದ ನನ್ನ ಬಳಿ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ ನಂ.2 ಮತ್ತು 4 ರವರು ತಮ್ಮ ಸ್ವಂತ ಹಣದಿಂದ ಸದರಿ ಆಸ್ತಿಗಳನ್ನು ಖರೀದಿಸಿದ್ದರಿಂದ ಸದರಿ ಆಸ್ತಿಗಳು ಅವರ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಸಾಕ್ಷಿಯು ಒಟ್ಟು ಕುಟುಂಬದ ಪರವಾಗಿ ಖರೀದಿಸಿದ ಆಸ್ತಿಗಳು ಎಂದು ಹೇಳುತ್ತಾರೆ. ಪ್ರತಿವಾದಿ ನಂ.2 ಮತ್ತು 4 ರವರು ಆಸ್ತಿಗಳನ್ನು ಖರೀದಿಸಿದ ದಿನಾಂಕದಿಂದ ಇಲ್ಲಿಯವರೆಗೆ ಸದರಿ ಆಸ್ತಿಗಳಲ್ಲಿ ತಾವೇ ಸ್ವಂತವಾಗಿ ಸಾಗುವಳಿ ಮಾಡುತ್ತಾ

ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಸದಸ್ಯರು ಸಾಗುವಳಿ ಮಾಡುತ್ತಿದ್ದೆವೆ ಎಂದು ಸಾಕ್ಷಿ ನುಡಿಯುತ್ತಾರೆ. ಕಬ್ಬು ಬೆಳೆಯ ಬಿಲ್ಲುಗಳು, ಸಕ್ಕರೆ ಕಾರ್ಖಾನೆಗೆ ಪ್ರತಿವಾದಿ ನಂ.2 ಮತ್ತು 4 ರವರು ತಮ್ಮ ತಮ್ಮ ಜಮೀನಿನ ಕಬ್ಬು ಬೆಳೆಯನ್ನು ಕೊಟ್ಟಿದ್ದು ಅವರ ಹೆಸರಿನಲ್ಲಿ ಕೊಡಲಾಗಿದೆ ಎಂದರೆ ಸರಿಯಲ್ಲ.

14. ಸರ್ವೆ ನಂ.82/1 ಎ, 82/2 ಮತ್ತು 82/3 ದಾವಾ ಆಸ್ತಿಗಳ ಕುರಿತು ಅಸಲ ದಾವಾ ನಂ.40/2016 ಸಲ್ಲಿಸಲಾಗಿದ್ದು ಅದರಲ್ಲಿ ಪ್ರತಿಬಂಧಕ ಆಜ್ಞೆ ಹೊರಡಿಸಲಾಗಿದೆ ಎಂದರೆ ಸಾಕ್ಷಿಯು ಸದರಿ ದಾವೆಗೆ ನಾನು ಪಕ್ಷಗಾರನಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಯು ಮುಂದುವರೆದು ಸದರಿ ದಾವೆಯಲ್ಲಿ ಕೇವಲ ಈ ದಾವೆಯ ವಾದಿ ನ.1 ಮತ್ತು ಪ್ರತಿವಾದಿ ನಂ.5 ರವರ ವಿರುದ್ಧ ಪ್ರತಿಬಂಧಕ ಆಜ್ಞೆ ಇದೆ ಎಂದು ಹೇಳುತ್ತಾರೆ. ಸದರಿ ಪ್ರತಿಬಂಧಕ ಆಜ್ಞೆ ಆದೇಶ ಇಲ್ಲಿಯವರೆಗೆ ಚಾಲ್ತಿಯಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನೀವು ನಿಮ್ಮ ಹೆಸರಿನಲ್ಲಿರುವ ಆಸ್ತಿಗಳ ಕುರಿತು ಏನು ಬರೆಸಿರಿವುದಿಲ್ಲ ಎಂದರೆ ಸಾಕ್ಷಿಯು ನನ್ನ ಹೆಸರಿನಲ್ಲಿ ಇರುವ ಆಸ್ತಿಗಳನ್ನು ನಾನು ಬ್ಯಾಂಕಿನಿಂದ ಸಾಲ ಪಡೆದು ಖರೀದಿಸಿದ್ದರಿಂದ ಸದರಿ ಆಸ್ತಿಗಳು ನನ್ನ ಸ್ವಯಾರ್ಜಿತ ಆಸ್ತಿ ಆಗಿದ್ದ ಅದರ ಬಗ್ಗೆ ಬರೆಸಿಲ್ಲ ಎಂದು ಹೇಳುತ್ತಾರೆ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬ್ಯಾಂಕಿನಿಂದ ಸಾಲ ಪಡೆದು ಖರೀದಿಸಿದ್ದೆನೆ ಎಂದು ಸಹ ಬರೆಸಿಲ್ಲ. ನಾನು ಪ್ರತಿವಾದಿ ನಂ.2 ರವರು ಸದರಿ ನನ್ನ ಹೆಸರಿನಲ್ಲಿ ಇರುವ ಆಸ್ತಿಗಳ ಕುರಿತು ತಮ್ಮ ಪ್ರತಿವಾದ ಪತ್ರದಲ್ಲಿ ತಿಳಿಸಿದ್ದರು ಸಹ ನಾನು ಸದರಿ ವಿಚಾರ ಗೊತ್ತಿದ್ದು ನನ್ನ ಮುಖ್ಯ ವಿಚಾರಣೆ ಪ್ರಮಾಣ

ಪತ್ರದಲ್ಲಿ ಆ ವಿಷಯಗಳನ್ನು ಬರೆಸಿಲ್ಲ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರು ಮಾಡಿದ್ದೆನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಸುಳ್ಳು ವಿಷಯಗಳನ್ನು ಬರೆಯಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಅಂದರೆ ಸರಿಯಲ್ಲ.

**ಪಾಟೀ ಸವಾಲುಃ** ಪ್ರತಿವಾದಿ ನಂ.5 ರ ಪರ ವಕೀಲರು ಹಾಜರು ಇದ್ದು ಪ್ರತಿವಾದಿ ನಂ.2 ಮತ್ತು 4 ರವರ ಪರ ವಕೀಲರು ಕೇಳಿರುವ ಪಾಟೀ ಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು, ಪ್ರತಿವಾದಿ ನಂ.5 ರವರು ಈಗಾಗಲೆ ಪ್ರತಿವಾದಿ ನಂ.2 ಮತ್ತು 4 ರವರು ಸಲ್ಲಿಸಿರುವ ಪ್ರತಿವಾದ ಪತ್ರದ ಅಂಶಗಳನ್ನು ಅಳವಡಿಸಿಕೊಂಡಿದ್ದಾರೆ ಆದ್ದರಿಂದ ಪಾಟೀ ಸವಾಲನ್ನು ಸಹ ಅಳವಡಿಸಿಕೊಳ್ಳಲು ಅನುಮತಿಸಲಾಯಿತು.

**ಮರುವಿಚಾರಣೆ ಇಲ್ಲ.**

**( ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ ಸಿ,**
**ಖಾನಾಪೂರ .**